ವಿದ್ಯೆ, ಬುದ್ಧಿ, ದುಡ್ಡು ಮನುಷ್ಯನ್ನ ಇದ್ದ ಕಡೆ ಇರಕ್ಕೆ ಬಿಡೋದುಂಟಾ ನೀವೇ ಹೇಳಿ? ಹಂಗೆ ತಿಮ್ಮಪ್ಪನ್ನ ಅಣ್ತಮ್ಮರು ಯಾವ್ಯಾವ ಇದ್ಯೆ ಕಲ್ತಿದ್ರೋ ಯಾರಗ್ಗೊತ್ತು... ಒಳ್ಳೇದೋ, ಕೆಟ್ಟದ್ದೋ.. ಯಾವುದೇ ಆದ್ರೂ ಅದು ಅವರ ಬದುಕಿನ ದಿಕ್ಕು ಅನ್ನದು ಮಾತ್ರ ನಿಜ! ರಾಜನಳ್ಳಿ ಅವ್ವ ಹೇಳಿದ ತಿರುಪತಿ ತಿಮ್ಮಪ್ಪನ ಕಥೆಯೊಂದಿಗೆ ಹಾಸನದ ಭಾಷೆಯನ್ನು ಈ ಬಾರಿಯ 'ಚೆನ್ನುಡಿ'ಯಲ್ಲಿ ಕಟ್ಟಿಕೊಟ್ಟಿದ್ದಾರೆ

ಎಚ್‌. ಆರ್‌. ಸುಜಾತಾ.





# ಊರ ಮೇಲೊಂದೂರು ದೂರವೇನೋ ತಮ್ಮಯ್ಯ... ಏ ಗಿಣಿ ಏ ಗಿಣಿಯೇ...

**ತಿರುಪತಿ ತಿಮ್ಮಪ್ಪನ ಅಣ್ಣತಮ್ಮರು ನೆಲೆಗೊಂಡ ಕಥೆ**

ರಾಜನಳ್ಳಿ ಅವ್ವ ಆ ದಿನ ಅಕ್ಕರೇಲಿ ನನ್ನಾಸೆಯಂಗೆ ಕಥೆ ಹೇಳೋದಿಕ್ಕೆ ಕೂತಿತ್ತು... ಯಾರು ಕೇಳ್ತಾರೋ ಅವರ ಸಂಸಾರದ ಕಥೆಯೇನೋ ಅದು ಅನ್ನೋ ಹಂಗೆ ಅವ್ವ ಕಥೆ ಹೇಳದು. ಆ ಕಥೆ ನಮ್ಮ ಬುಡಕಟ್ಟಿನ ಮನೆದೇವರು ಸಕುನಿ ರಂಗನಾಥನ ಕರುಳು ಬಳ್ಳಿ ಕಥೆ ಅನ್ನಿ, ಎಲ್ಲ ಕಥೆನೂ ಅಂಗೇ ನಮ್ಮ ಕರುಳೊಳಗಿನ ಎಳೆಯ ಬಂದು ತಾಗಿ, ಅದರ ವತ್ತಿಲೇ ಅಡ್ಡಾಡಕೊಂಡು ಹೋಯ್ತಾನೆ ಇರ್ತವೆ, ಕೊನಿಗೆ ಕಥೆ ಅನ್ನೊವು ಬಾಯಿಂದ ಬಾಯಿಗೆ ದಾಟ್ಕಂಡು, ಭೂಮಿ ಮೇಲೆ ಉಳ್ಕಂಡೆಬಿಡ್ತವೆ. ಸರಿ, ಅವ್ವನ್ನ ಕಥೆ ರೈಲು ಈಗ ನಮ್ಮುಂದೆ ಹೊರಟೇ ಬುಡ್ತು... ಕೇಳಿಸ್ಕಳಿ...

ತಿರುಪತೀಲಿರೋ ತಿಮ್ಮಪ್ಪನ ಒಂದಾಗಿ ಹುಟ್ಟೋರು ಆರಾಳು. ತಿಮ್ಮಪ್ಪ, ಸಕುನಿ ರಂಗ, ಮೇಲುಕೋಟೆ ಚೆಲುವರಾಯ, ಬೇಲೂರ ಚೆನ್ನಿಗರಾಯ, ಕೊಂಡಜ್ಜಿ ಅಲಘನಾಥ. ಅವರ ಕುಟೆ ಹುಟ್ಟೋಳು ದುರ್ಗಮ್ಮ ಒಬ್ಳೆ ತೆಂಗೆ. ಇವ್ರು ಒಬ್ ತಾಯಿ ಹೊಟ್ಟೇಲಿ ಹುಟ್ಟಿ ಮುತ್ನಂಗೆ ಬೆಳುದ್ರು.

ತಿಮ್ಮಪ್ಪ ಎಲ್ರಗೂ ಹಿರಿಯಣ್ಣ, ಏನು ಮಾಡದ? ನಮ್ಮಪ್ಪ ಮಾಡಿರೊ ಅಡವು ಆಸ್ತೀಲೆ ಉಳಕಂಡ್ರೆ ಬೆಲೆ ಬರೋದಿಲ್ಲ. ಹಂಚಿದ್ರೆ ಪಿಂಛಣ್ಣ ಅಂತವ ಅದ್ರಲ್ಲಿ ಮುಕ್ಕ ಹರ್ಯೊ ಗೇಯ್ಮೆ ಮಾಡಿದ್ರೂ ಸೈತವ ಹೊಟ್ಟಿಗೆ, ಬಟ್ಟೆನ್ಯಾರ. ಇದ ಬುಟ್ಟು ಮುಂದಕ್ಕೋದ್ರೆ ಕೈಕಾಲು ಚಾಚ್ಕಂಡು ನೆಮ್ದೀಲಿ ಇರಬೋದು ಅಲ್ವಾ? ಅಂದೋನೆಯ ಒಂದಾಗಿ ಹುಟ್ಟೋರ ಕರದು ಅವರೊಂದಿಗೆ ಪಂಚಾತಿ ಮಾಡದ. ನಾವು ಒಂದೊಂದು ದಿಕ್ಕಿಗೆ ಚಲಿಸಿ ಒಂದೊಂದು ಬೆಟ್ಟ ಹತ್ತಿ ಅಲ್ಲಿ ನೆಲೆಯಾಗಣ. ನಾನಿಲ್ಲೇ ನಿಲ್ತೀನಿ. ನೀವು ಮುಂದಕ್ಕೆ ಹೊರಡಿ.